## ಗೌರವಾನ್ವಿತ 3 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಬೆಳಗಾವಿ.

ಮಿಸಲೇನಿಯಸ್ ನಂಃ 1 ಃ 2018

ಪಿ. ಡಬ್ಲ್ಯೂ- 1

ದಿ. 08-06-2018 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು .

ಪಾಟೀ ಸವಾಲು ಃ ಶ್ರೀ. ಎಸ್. ಎ. ವಕೀಲರಿಂದ ಃ-

ನಾನು ಪಿಯುಸಿವರೆಗೂ ಓದಿರುತೇನೆ . ಅರ್ಜಿದಾರರು ನನ್ನ ಮಾವ. ನಾನು ವಿದ್ಯಾಂತವಂತನೆಂದು ನನ್ನ ಮಾವ ಅಧಿಕಾರ ಪತ್ರವನ್ನು ನೀಡಿರುತ್ತಾರೆ . ದಾವ ಸಂಖ್ಯೆ 170/17 ನ್ನು ಮಾರ್ಚ 2017 ರಲ್ಲಿ ಹೂಡಲಾಗಿರುತ್ತದೆ ಆದರೆ ದಿನಾಂಕ ಹೇಳಲು ಬರುವುದಿಲ್ಲ. ಮೇಲಿನ ದಾವೆ ಹೂಡಿದ ದಿನದಿಂದಲೂ ನಿಖಾಲಿಯಾಗುವವರೆಗೂ ಎಷ್ಟು ದಿನ ನ್ಯಾಯಾಲಯದಲ್ಲಿ ಹಾಜರಿದ್ದೆ ಅಂದರೆ ತನ್ನ ವಕೀಲರಿಗೆ ತಿಳಿದಿದೆ ಎಂದು ನುಡಿಯುತ್ತಾರೆ. ದಾವೆಯಲ್ಲಿ ಅಧಿಕಾರ ಪತ್ರ ನೀಡಿದ ನಂತರ ದಾವೆಯಲ್ಲಿ ಹಾಜರಾಗುವ ಜವಾಬ್ದಾರಿ ನನಗೆಯಿತ್ತು ಅಂದರೆ ಸರಿ. ಸಾಕ್ಷಿಗೆ ನಿಪಿ-3 ನ್ನು ತೋರಿಸಿ ಸದರಿ ದಾಖಲೆಯಲ್ಲಿ ವಾದಿಗಳು ದಾವೆ ಹೂಡಿದಾಗಿನಿಂದಲೂ ನಿಖಾಲೆಯಾಗುವವರೆಗೂ ಹಾಜರಾಗಿಲ್ಲ ಅಂದರೆ ಸರಿ. ದಿನಾಂಕ 21-08-2017 ರಿಂದ ದಾವೆ ನಿಖಾಲೆಯಾಗುವವರೆಗೂ ನಾನು ನ್ಯಾಯಾಲಯದಲ್ಲಿ ಹಾಜರಿರಲಿಲ್ಲ ಅಂದರೆ ಸರಿ. ಈ ದಾವೆಯಲ್ಲಿ ನ್ಯಾಯಾಲಯದ ನನ್ನ ವಿಚಾರಣೆ ಮಾಡಲು ಸಾಕಷ್ಟು ಅವಕಾಶ ನೀಡಿದ್ದರು ಅಂದರೆ ಸಾಕ್ಷಿಯು ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ .

2. ನನ್ನ ಮಾವ ಮತ್ತು ಪ್ರತಿವಾದಿ ಸ್ವಂತ ಸಹೋದರರು ಅಂದರೆ ಸರಿ. ಪ್ರತಿವಾದಿಯು ದಾವೆ ಹೂಡುವ ಮೊದಲು ಸಣ್ಣ ಮನೆ ಕಟ್ಟಲು ಆರಂಭಿಸಿದ್ದರು ಅಂದರೆ ಸರಿ. ನನ್ನ ಮಾವ ಪ್ರತಿವಾದಿಯ ಮೇಲೆ ವೈಯಕ್ತಿಕ ದ್ವೇಷದಿಂದ ಪ್ರತಿವಾದಿಯ ಕಟ್ಟಡ ಕಟ್ಟುವುದಕ್ಕೆ ಅಡಚಣೆ ಮಾಡುವ ಉದ್ದೇಶದಿಂದ ನನಗೆ ಅಧಿಕಾರ ಪತ್ರ ನೀಡಿ ದಾವೆ ಹೂಡಿಸಿದ್ದರು ಅಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ಮಧ್ಯಂತರ ಆದೇಶ ಕೋರಿ ಅರ್ಜಿ ಸಲ್ಲಿಸಿದ್ದೇವು ಅಂದರೆ ಸರಿ. ಸದರಿ ಅರ್ಜಿಯನ್ನು ದಿನಾಂಕ 24-04-2017 ರಂದು ಅರ್ಜಿಯನ್ನು ವಜಾ ಮಾಡಿರುತ್ತದೆ ಅಂದರೆ ಸರಿ. ಈ ದಾವೆಯಲ್ಲಿ

ಯಾವುದೇ ಉರುಳು ಇಲ್ಲದಿದ್ದರೂ ಮತ್ತೊಂದು ಅವಕಾಶ ಬೇಕೆಂದು ಸುಳ್ಳು ಅರ್ಜಿ ಸಲ್ಲಿಸಿದ್ದೆವು ಅಂದರೆ ಸರಿಯಲ್ಲ. ಈ ದಾವೆಗೆ ಸಾಕಷ್ಟು ಅವಕಾಶ ನೀಡಲಾಗಿತ್ತು ಅಂದರೆ ಸರಿ. ನ್ಯಾಯಾಲಯದ ಆದೇಶ ಸರಿಯಿದೆ ಎಂದರೆ ಸರಿಯಲ್ಲ. ಪ್ರತಿವಾದಿಗಳ ಮೇಲೆ ಸುಳ್ಳು ದಾವೆ ಹೂಡಿದ್ದರಿಂದ ಅವರ ಖರ್ಚಿಗೆ ನಾವು ಬಾಧ್ಯರು ಅಂದರೆ ಸರಿಯಲ್ಲ.

ಮರು ವಿಚಾರಣೆ ಃ ಇರುವುದಿಲ್ಲ.

( ಸಾಕ್ಷಿಯ ಹೇಳಿಕೆಯನ್ನು ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿಯಿದೆ .

3 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು,
ಬೆಳಗಾವಿ.